ಶ್ರೀ ಬಿ. ವಿ. ಕಕ್ಕಿಲಾಯ. ಟಾರ್ಗೆಟ ಮತ್ತು ಪ್ರೊಕ್ಯೂರಮೆಂಟ ನೋಡಿದರೆ, ೫೦ ಪರ್ಸೆಂಟಗಿಂತ ಕಡಿಮೆ ಇದೆ. ಆದುದರಿಂದ ಪ್ರೊಕ್ಯೂರಮೆಂಟ ತಮ್ಮ ಟಾರ್ಗೆಟ ಗುರಿ ಮುಟ್ಟುವ ಹಾಗೆ ಕ್ರಮ ತೆಗೆದು ಕೊಳ್ಳುತ್ತೀರಾ ?

ಶ್ರೀ ಕೆ. ಎಚ್. ಪಾಟೀಲ.—ಭತ್ತ ಒಂದು ಲಕ್ಷ ಟನ್ ಚಿಲ್ಲರೆ ಖರೀದಿ ಮಾಡಿರುವುದನ್ನು ಉತ್ತರದಲ್ಲಿ ಕೊಟ್ಟಿದೆ. ನಿಜವಾಗಿ ೨ ಲಕ್ಷ ೫೦ ಸಾವಿರ ಟನ್ ಖರೀದಿ ಮಾಡಬೇಕಾಗಿತ್ತು. ಈಗಾಗಲೇ ೧ ಲಕ್ಷ ೪೧ ಸಾವಿರ ಟನ್ ಮುಟ್ಟಿದ್ದೇವೆ. ನಾನು ಆಗಲೇ ಹೇಳಿದ ಹಾಗೆ ೨೫,೦೦೦ ಟನ್ ಸೀಸ್ ಮಾಡಿದ ಸ್ಟಾಕ್ಸ ಬರುತ್ತದೆ. ೧,೭೫,೦೦೦ ಟನ್ ಬಂದಿದೆ. ಉಳಿದದ್ದನ್ನು ಇನ್ನು ಒಂದು ತಿಂಗಳು ಅಥವಾ ಎರಡು ತಿಂಗಳೊಳಗೆ ಟ್ರಾನ್ಸಪೋರ್ಟ ಲೆವಿ ಮತ್ತು ಮಿಲ್ ಲೆವಿಯಿಂದ ಕೂಡಿಸಬಹುದು ಎಂದು ಆಶಯ ಮಾಡುತ್ತೇನೆ.

ಶ್ರೀ ಟಿ. ಆರ್. ಶಾಮಣ್ಣ —ಅನೇಕ ರೇಷನ್ ಅಂಗಡಿಗಳಲ್ಲಿ ರೇಷನ್ ಕ್ರಮವಾಗಿ ಸಿಕ್ಕುತ್ತಾ ಇಲ್ಲ. ಒಂದೊಂದು ಸಾರಿ ಒಟ್ಟೊಟ್ಟಿಗೆ ಬರುತ್ತದೆ. ಜನರು ಕಾರ್ಡ ತೆಗೆದುಕೊಂಡು ಹೋಗಿ, ಬ್ಯಾಗ ತೆಗೆದು ಕೊಂಡು ಹೋಗಿ ವಾಪಸ್ ಬರುತ್ತಿದ್ದಾರೆ. ಅದನ್ನು ತಪ್ಪಿಸುವುದಕ್ಕೆ ಏನು ಮಾಡುತ್ತೀರಿ ? ರೇಷನ್ ಕ್ರಮವಾಗಿ ಸಪ್ಲೈ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಕೆ. ಎಚ್. ಪಾಟೀಲ.—ಮಾನ್ಯ ಶಾಮಣ್ಣನವರು ಯಾವಾಗಿನ ತಮ್ಮ ಅನುಭವವನ್ನು ಹೇಳುತ್ತಿದ್ದಾರೋ ಗೊತ್ತಿಲ್ಲ. ಸ್ಟಾಕ ಹೆಚ್ಚು ಉಳಿದಿದೆ ಎಂದು ನನ್ನ ಗಮನಕ್ಕೆ ಬಂದಿದೆ. ಯಾವ ಷಾಪಿನಲ್ಲಿ ರೇಷನ್ ಇಲ್ಲ ಎಂದು ಹೇಳಿರುವುದನ್ನು ನನ್ನ ಗಮನಕ್ಕೆ ತಂದರೆ, ಆ ಷಾಪನ್ನು ಮುಚ್ಚಿಸುತ್ತೇನೆ. ಸದಾಕಾಲ ಜನರಿಗೆ ಸಿಗುವಂತೆ ಒಂದು ತಿಂಗಳು ಸ್ಟಾಕ ತರಿಸಿ ಇಟ್ಟಿದ್ದೇವೆ. ಅಂಗಡಿಯವರಿಗೆ ರೇಷನ್ನನ್ನು ಹಂತಹಂತವಾಗಿ ತೆಗೆದುಕೊಂಡು ಹೋಗಿ ಎಂದು ಹೇಳಿದ್ದೇವೆ. ಯಾವ ಕಾಲಕ್ಕೆ ಹೋದರೂ ಕಾರ್ಡು ದಾರರಿಗೆ ತೊಂದರೆಯಾಗಬಾರದು ಎನ್ನುವ ಉದ್ದೇಶ ಇದೆ. ಅದಕ್ಕೆ ವ್ಯತಿರಿಕ್ತವಾಗಿ ನಡೆದುಕೊಂಡ ಷಾಪನ್ನು ಗಮನಕ್ಕೆ ತಂದುಕೊಟ್ಟರೆ ಆ ಷಾಪನ್ನು ಬಂದ ಮಾಪುತ್ತೇವೆ.

SHORT NOTICE QUESTION AND ANSWER

ESTABLISHMENT OF POST GRADUATE CENTRE IN ENGINEERING

4. Sri KAGODU THIMMAPPA (Sagar).—

Will the Minister for Education be pleased to state :—

(*a*) whether the Karnataka University has decided to establish a Post Graduate Centre in Engineering in Sandur Taluk; if so, when the decision was taken ;

(*b*) whether the Karnataka University had asked for grant of land for this Post Graduate Centre; the place and the extent of land asked for;

(*c*) when the site has been handed over to the University?

Sri M. MALLIKARJUNSWAMY (Minister for Education).—

(*a*) Yes. Syndicate took a decision on 30-4-1973.

(*b*) Yes. About 1,500 to 2,000 acres of land at Nandihalli Village in Sandur Taluk had been asked for.

(*c*) A land measuring 242.65 acres has been handed over on 29-1-1974.

ಶ್ರೀ ಕಾಗೋಡು ತಿಮ್ಮಪ್ಪ.—ಸ್ವಾಮಿ, ಸಂಡೂರಿನಲ್ಲಿ ಸುಮಾರು ೨೪೨ ಎಕರೆ ೬೫ ಗುಂಟೆ ಪ್ರದೇಶವನ್ನು ತಾರೀಖು ೨೯-೧-೧೯೭೪ ರಲ್ಲಿ ಸ್ವಾಧೀನ ತೆಗೆದುಕೊಂಡಿದ್ದೇವೆ ಎಂದು ಹೇಳಿದ್ದೀರಿ. ನಮ್ಮ ಕರ್ನಾಟಕ ಯೂನಿವರ್ಸಿಟಿ ಎಕ್ಸಪರ್ಟ್ ಕಮೀಟಿಯವರು ಈ ನಿವೇಶನವನ್ನು ನೋಡಲಿಕ್ಕೆ ಏನಾದರೂ ಅಲ್ಲಿಗೆ ಹೋಗಿದ್ದರೆ ? ಹಾಗೆ ಹೋದಂಥ ಸಂದರ್ಭದಲ್ಲಿ ಎಷ್ಟು ನಿವೇಶನಗಳನ್ನು ನೋಡಿ ತಮಗೇನಾದರೂ ವರದಿ ಕೊಟ್ಟಿದ್ದಾರೆಯೇ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ. ೧,೫೦೦ ಎಕರೆಯಿಂದ ೨,೦೦೦ ಎಕರೆ ವರೆಗೆ ಭೂಮಿ ಬೇಕು ಎಂದು ಕೇಳಿದ್ದಾರೆ. ಒಂದು ಜಮೀನನ್ನು ಆ ಕಮೀಟಿಯವರು ನೋಡಿ ಬಹಳ ಚೆನ್ನಾಗಿದೆ ಎಂದು ಹೇಳಿದ್ದಾರೆ.

ಶ್ರೀ ಕಾಗೋಡು ತಿಮ್ಮಪ್ಪ.—ಸುಮಾರು ೧,೫೦೦ ಎಕರೆಯಿಂದ ೨,೦೦೦ ಎಕರೆ ವರೆಗೆ ಭೂಮಿ ಬೇಕು ಎಂದು ಹೇಳಿದ್ದಾರೆಂದು ಹೇಳಿದಿರಿ. ಈಗಾಗಲೇ ೨೪೨ ಎಕರೆ ಮಾತ್ರ ವಹಿಸಿಕೊಂಡಿದ್ದೀರಿ. ಅವರು ಕೇಳಿರತಕ್ಕಷ್ಟು ಭೂಮಿ ಒಂದೇ ಕಡೆ ಸಿಕ್ಕದೇ ಹೋದರೆ ಯುನಿವರ್ಸಿಟಿಯವರು ಪೋಸ್ಟ ಗ್ರಾಜುಯೇಟ್ ಕೋರ್ಸನ್ನೇ ಸ್ಥಾಪನೆ ಮಾಡುವುದಕ್ಕೆ ಅನಾನುಕೂಲವಾಗುವುದಿಲ್ಲವೇ ? ಆ ದೃಷ್ಟಿಯಿಂದ ೧,೫೦೦ ಎಕರೆ ಸಿಗತಕ್ಕ ಬೇರೆ ಪ್ರದೇಶ ಸಂಡೂರಿನಲ್ಲಿದ್ದರೆ ಅಂಥ ಕಡೆ ಏಕೆ ಇದನ್ನು ಪರಿಶೀಲನೆ ಮಾಡಬಾರದು ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಅವರು ಕೇಳಿರತಕ್ಕದ್ದು ೧,೫೦೦ ಎಕರೆಯಿಂದ ೨,೦೦೦ ಎಕರೆ ಬೇಕು ಎಂದು. ಈಗ ಕೊಟ್ಟಿರತಕ್ಕ ಜಮೀನು ಏನು ಇದೆ. ಅದರ ಸುತ್ತ ಜಮೀನು ಇದೆ. ಅದನ್ನು ಅಕ್ವೈರ ಮಾಡಿಕೊಳ್ಳಬಹುದು. ಅಡ್ಡಿಯೇನೂ ಆಗುವುದಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.—ಸ್ವಾಮಿ, ಪೋಸ್ಟ ಗ್ರಾಜುಯೇಟ ಕೋರ್ಸ ಸ್ಥಾಪನೆ ಮಾಡುವುದಾದರೆ ಅದಕ್ಕೆ ವಿಶಾಲವಾದಂಥ ಮೈದಾನ, ವಿಶಾಲವಾದಂಥ ಪ್ರದೇಶ ಬೇಕಾಗುತ್ತದೆ. ನಂದಿಹಳ್ಳಿ ಪ್ರದೇಶ ಗುಡ್ಡಗಾಡಿನಿಂದ ಕೂಡಿದ ಪ್ರದೇಶವಾಗಿದೆ. ತಮಗೆ ಮಟ್ಟ ಮತ್ತು ವಿಸ್ತಾರ ಪ್ರದೇಶ ಅಲ್ಲಿ ಸಿಕ್ಕುವುದಿಲ್ಲ ಎನ್ನುವುದು ತಮ್ಮ ಗಮನಕ್ಕೆ ಬಂದಿದೆಯೇ ? ಈ ದೃಷ್ಟಿಯಿಂದ ಸಂಡೂರಿನಲ್ಲಿ ಬೇರೆ ವಿಸ್ತಾರವಾದ, ವಿಶಾಲವಾದ ಪ್ರದೇಶ ಸಿಕ್ಕಿದರೆ, ಅಂಥ ಕಡೆ ಪ್ರಾರಂಭ ಮಾಡುವುದಕ್ಕೆ ಆಲೋಚನೆ ಮಾಡುತ್ತೀರಾ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಆ ಸ್ಥಳ ಬಹಳ ಚೆನ್ನಾಗಿದೆ. ನಯನ ಮನೋಹರವಾಗಿದೆ. ಕಳೆದ ವರ್ಷ ಆಕ್ಸಫರ್ಡ ಮತ್ತು ಕೇಂಬ್ರಿಡ್ಜ್ ವಿಶ್ವವಿದ್ಯಾನಿಲಯಗಳನ್ನು ನೋಡಿಕೊಂಡು ಬಂದಿದೆ. ಅಲ್ಲಿರತಕ್ಕ ನೈಸರ್ಗಿಕ ವಾತಾವರಣ ಥಿನಿದೆ. ಅದು ಕಣ್ಣಿಗೆ ಹಬ್ಬವನ್ನು, ಕಿವಿಗೆ ಇಂಪನ್ನು ಹಾಗೂ ಮನಸ್ಸಿಗೆ ಆಹ್ಲಾದವನ್ನು ಉಂಟುಮಾಡತಕ್ಕ ಸ್ಥಿತಿಯಲ್ಲಿದೆ.

ಶ್ರೀ ಕೊಣಂದೂರು ಲಿಂಗಪ್ಪ.—ನಯನ ಮನೋಹರ ಸುಂದರವಾದ ತಾಣ ಏನಿದೆ ಅಲ್ಲಿ. ಕಲ್ಲಿನ ಕಟ್ಟಡ ಕಟ್ಟಿ ಸೌಂದರ್ಯ ದೇವತೆಯನ್ನು ಕೊಲೆ ಮಾಡುವ ಬದಲು, ಅದನ್ನು ಹಾಗೇ ಉಳಿಸಿ. ವಿಶಾಲವಾದ ಜಾಗ ತೋರಿಸುತ್ತಾರೆ, ಅಲ್ಲಿ ಏಕೆ ಮಾಡಬಾರದು ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಈಗಾಗಲೇ ಆ ಸೈಟನ್ನು ಕೂಡ ಸೆಲೆಕ್ಟ ಮಾಡಿದ್ದಾರೆ.

ಅಧ್ಯಕ್ಷರು.—ಇಲ್ಲಿಗೆ ಪ್ರಶ್ನೋತ್ತರ ವೇಳೆ ಮುಗಿಯಿತು.

CALLING ATTENTION TO MATTERS OF URGENT PUBLIC IMPORTANCE

(i) Re: Cancellation of SSLC Examination Centre at T. B. Dam.

Sri B. SATHYANARAYANA SINGH (Hospet).—

I call the attention of the Hon. Minister of State for Primary and Secondary Education to the hardship caused to the students due to the cancellation of S.S.L.C. Examination Centre at T. B. Dam.